ಮಾಡಬೇಕೆಂದು ಯೋಚಿಸಿದನು.

ಅಷ್ಟರಲ್ಲಿಯೇ ನಮ್ಮ ಉಂಡಾಡಿ ಗುಂಡನು ದೊಣ್ಣೆಯಿಂದ ಸರಿಯಾಗಿ ವೇಷಧಾರಿಗೆ ಎರಡು ಬಿಟ್ಟನು. ಹೊಡೆತ ಬೀಳುತ್ತಿದ್ದಂತೆ, ವೇಷಧಾರಿ ಹುಲಿಯ ಮನುಷ್ಯ ಅಯ್ಯಯ್ಯೋ ಎಂದು ಕಿರುಚಿದನು.

ಉಂಡಾಡಿ ಗುಂಡನು, ಹುಲಿಯು ಮನುಷ್ಯನಂತೆ ಅರಚುವುದನ್ನು ಕಂಡು 'ಓಹೋ ಇದು ಹುಲಿಯಲ್ಲ, ಮನುಷ್ಯ ನಮ್ಮನ್ನು ಹೆದರಿಸಲು ಬಂದಿದ್ದಾನೆ' ಎನ್ನುತ್ತ ದೊಣ್ಣೆಯಿಂದ ಮತ್ತೆರಡು ಹೊಡೆದನು. ಇವನೇ ನಮ್ಮ ಹಳ್ಳಿಯ ದನಕ್ಕೆ ಗಾಯ ಮಾಡಿದವನೆಂದು ಕೊಳ್ಳುತ್ತ ಅವನನ್ನು ಧರಧರನೇ ಹಳ್ಳಿಗೆ ಎಳೆದು ತಂದನು.

ಉಂಡಾಡಿಗುಂಡ, ಹುಲಿಯನ್ನು ಎಳೆದು ತರುತ್ತಿರುವುದನ್ನು ಕಂಡ ಹಳ್ಳಿಯ ಜನ ಬೆಚ್ಚಿ ಬಿದ್ದರು. ಉಂಡಾಡಿ ಗುಂಡನೆಂದ 'ಇದು ಹುಲಿಯಲ್ಲ, ಹುಲಿಯವೇಷಧಾರಿ. ಇವನೇ ನಮ್ಮ ಹಳ್ಳಿಯ ದನವನ್ನು ಗಾಯಗೊಳಿಸಿ, ಹಳ್ಳಿಯವರನ್ನು ಹೆದರಿಸುತ್ತಿದ್ದವನು' ಎಂದನು.

ಹುಲಿವೇಷ ಧಾರಿಯನ್ನು ಹಳ್ಳಿಯ ಜನ ಚೆನ್ನಾಗಿ ತರಾಟೆ ತೆಗೆದುಕೊಂಡರು. ಅವನಿಗೆ ನಾಲ್ಕು ಹೊಡೆತ ಬಿಗಿದ ಮೇಲೆ, ಆ ಕಳ್ಳ ತನ್ನ ಜೊತೆಗೆ ಇನ್ನೂ ಮೂವರಿದ್ದಾರೆ. ಅಲ್ಲಿ ಬೆಲೆಬಾಳುವ ಕಲ್ಲಿನ ಹರಳು ಇವೆ. ಅದನ್ನು ವಿದೇಶಕ್ಕೆ ಮಾರಿ ಹಣ ಮಾಡಬೇಕೆಂದಿದ್ದೆವು' ಎಂದು ಎಲ್ಲವನ್ನೂ ಬಾಯಿಬಿಟ್ಟನು.

ಕೂಡಲೇ ಹಳ್ಳಿಯವರು ಪೊಲೀಸ್‌ರಿಗೂ, ಫಾರೆಸ್ಟ್ ಇಲಾಖೆಯವರಿಗೂ ವಿಷಯ ಮುಟ್ಟಿಸಿದರು. ಓಡಿ ಹೋಗಲು ಯತ್ನಿಸಿದ್ದ ಇನ್ನುಳಿದ ಮೂವರು ಕಳ್ಳರನ್ನು ಪೊಲೀಸರು ಹಿಡಿದರು. ಅಷ್ಟೇ ಅಲ್ಲ ಬೇರೆ ದೇಶಕ್ಕೆ ಮಾರಾಟ ಮಾಡಲು ಕೂಡಿಟ್ಟಿದ್ದ ಬೆಲೆ ಬಾಳುವ ಹರಳುಗಳನ್ನು ಆ ಕಳ್ಳರಿಂದ ವಶಪಡಿಸಿಕೊಂಡರು.

ಇದಕ್ಕೆಲ್ಲ ಉಂಡಾಡಿಗುಂಡನ ಸಾಹಸವೇ ಕಾರಣವೆಂದು ಹಳ್ಳಿಯ ಜನರೆಲ್ಲ ಕೊಂಡಾಡಿದ್ದೆ ಕೊಂಡಾಡಿದ್ದು. ಸರ್ಕಾರದಿಂದ ಬಹುಮಾನ ಪಡೆದ.

■

# ಜಾನಕಿಯ ಜಾಣತನ



■ **ಅಮರಯ್ಯಾ ಪತ್ರಿಮಠ, ಸುರಪುರ**

ರಂಗಾಪುರದಲ್ಲಿ ಮಾದಪ್ಪ–ಜಾನಕಿ ದಂಪತಿ ಇದ್ದರು. ವ್ಯವಸಾಯವನ್ನೇ ನಂಬಿಕೊಂಡಿದ್ದ ಬಡ ಕುಟುಂಬ ಅದಾಗಿತ್ತು. ಭೀಕರ ಬರಗಾಲದಿಂದಾಗಿ, ಮಳೆ ಬಾರದೇ ವ್ಯವಸಾಯ ಮಾಡಲಾಗದೇ ಸಂಸಾರ ಸಾಗಿಸುವುದೇ ತುಂಬಾ ಕಷ್ಟದ ದಿನಗಳು ಕಾಡತೊಡಗಿದವು. ಒಮ್ಮೆ... ಬೆಳಿಗ್ಗೆ ಋಷಿಯೊಬ್ಬ ಮನೆ ಮುಂದೆ ನಿಂತು, 'ಅಮ್ಮಾ ತಾಯಿ.. ಏನಾದ್ರೂ ಭಿಕ್ಷೆ ಹಾಕಿ!' ಎಂದ. ಮಾದಪ್ಪ ಋಷಿಯನ್ನು ದುರುಗುಟ್ಟಿ ನೋಡುತ್ತ 'ಅಯ್ಯೋ... ನಮಗೆ ತಿನ್ನಲು ಹಿಡಿ ಅಕ್ಕಿಯಿಲ್ಲ ಏನು ದಾನ ಮಾಡೋದು ನಡೆಯಾಚೆ' ಎಂದು ದಬಾಯಿಸಿದ.

ಈ ಮಾತು ಕೇಳಿ ಆ ಋಷಿಗೆ ತುಂಬಾ ದುಃಖವಾಯಿತು. ತಮ್ಮ ಜೋಳಿಗೆಯಿಂದ ಹಿಡಿ ದವಸವನ್ನು ಕೊಡುತ್ತಾ 'ಈ ದವಸವನ್ನು ನಿಮ್ಮ ಹೊಲದಲ್ಲಿ ಬಿತ್ತನೆ ಮಾಡಿ ಆ ಭಗವಂತ ನಿಮ್ಮ ಕಷ್ಟ ಪರಿಹರಿಸುತ್ತಾನೆ' ಎಂದು ಹರಸಿ ಹೋದ. ಆ ದವಸಗಳನ್ನು ಮಾದಪ್ಪ ಪರಿಶೀಲಿಸಿದ ಅವು ಬಿತ್ತನೆಗೆ ಯೋಗ್ಯವಾಗಿರದೇ ಜೊಳ್ಳಾಗಿದ್ದವು. 'ಛೇ... ಛೇ! ಎಂಥಾ ಹುಂಬ ಈ ಸಾಧು! ಇವುಗಳಿಂದ ಫಸಲು ಖಂಡಿತಾ ಸಾಧ್ಯವಿಲ್ಲ...' ಎಂದು ಕೋಪದಿಂದ ಬಿಸಾಡಲು ಮುಂದಾದಾಗ ಜಾನಕಿ 'ನಿಲ್ಲಿ... ನಿಲ್ಲಿ! ಹಾಗೆಲ್ಲಾ ಬಿಸಾಡಬೇಡಿ. ಕೊಡಿ ಇಲ್ಲಿ ಕೋಳಿಗಳಿಗಾದರೂ ಹಾಕ್ತೇನೆ!' ಎಂದು ಆ ದವಸವನ್ನು ಪಡೆದುಕೊಂಡಳು. ಆದರೆ... ಕೋಳಿಗಳಿಗೆ ಹಾಕದೇ ರಹಸ್ಯವಾಗಿ ಅವುಗಳನ್ನು ತಮ್ಮ ಹೊಲದಲ್ಲಿ ಬಿತ್ತನೆ ಮಾಡಿದಳು.

ಅವಳಿಗೆ ಸಾಧು ಸಂತರೆಂದರೆ ತುಂಬಾ ಗೌರವ ಭಕ್ತಿ. ಅಂಥವರ ಮಾತು ವೇದವಾಕ್ಯವೆಂದೇ ನಂಬಿದ್ದಳು. ಆ ನಂಬಿಕೆಯಿಂದಲೇ ಹಗಲಿರುಳು ಬಾವಿಯಿಂದ ನೀರು ಹರಿಸಿ ಶ್ರಮಪಟ್ಟು ದುಡಿದಳು. ಆಕೆಯ ನಂಬಿಕೆ ಹುಸಿಯಾಗಲಿಲ್ಲ. ಕೆಲ ದಿನಗಳಲ್ಲೇ ಫಸಲು ಚೆನ್ನಾಗಿ ಬಂತು. ಇದನ್ನು ಕಂಡ ಮಾದಪ್ಪ ಆಕೆಯ ಜಾಣತನಕ್ಕೆ ಮೆಚ್ಚಿ ಹೊಗಳಿದ. ಜಾನಕಿ ಜಾಣತನದಿಂದಾಗಿ ಸಂಸಾರವನ್ನು ಸಂಕಷ್ಟದಿಂದ ಪಾರು ಮಾಡಿದಳು.

■